# ಸ್ವಾತಂತ್ರ್ಯದ ಓಟ

ಗದ್ದೆಯಲ್ಲಿ ಓಡಿದ್ದ ಹುಡುಗಿ ಹಿಮಾ ದಾಸ್ ಈಗ ಕೊರಳ ತುಂಬ ಚಿನ್ನದ ಪದಕಗಳನ್ನು ಅಲಂಕರಿಸಿಕೊಂಡಿರುವ ಸಾಧಕಿ. ಯುವ ತಲೆಮಾರಿಗೆ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಹಾಗೂ ದುರ್ಬಲ ಸಮುದಾಯದ ತರುಣ ತರುಣಿಯರಿಗೆ ಹಿಮಾ ಬದುಕು–ಸಾಧನೆ ಸ್ಫೂರ್ತಿದಾಯಕ.

■ ನರೇಂದ್ರ ಎಸ್. ಗಂಗೊಳ್ಳಿ




ತನ್ನ ಅವಕಾಶಗಳನ್ನು ತಾನೇ ಸೃಷ್ಟಿಸಿಕೊಂಡು ಸಾಧನೆಯ ಸ್ವಾತಂತ್ರ್ಯವನ್ನು ದೊರಕಿಸಿಕೊಂಡ ಅಪೂರ್ವ ಸಾಧಕಿಯ ಹಿಮಾ ದಾಸ್.

ಅದು ಜೆಕ್ ರಿಪಬ್ಲಿಕ್‌ನಲ್ಲಿ ನಡೆಯುತ್ತಿದ್ದ ಟ್ಯಾಬರ್ ಅಥ್ಲೆಟಿಕ್ಸ್ ಮೀಟ್. 400 ಮೀಟರ್ ಓಟದ ಸ್ಪರ್ಧೆಗಾಗಿ ಸ್ಪರ್ಧಿಗಳು ಟ್ರ್ಯಾಕ್‌ಗಿಳಿದರು. ಜಮೈಕಾ, ಇಟಲಿ, ರೊಮೇನಿಯಾ, ಕೀನ್ಯಾ, ಅಮೆರಿಕ, ಕೆನಡಾ, ಆಸ್ಟ್ರೇಲಿಯಾದ ಘಟಾನುಘಟಿ ಓಟಗಾರ್ತಿಯರು ಅಲ್ಲಿದ್ದರು. ಭಾರತದ ಪರವಾಗಿ ಲೇನ್ ನಂಬರ್ 4ರಲ್ಲಿ ಹತ್ತೊಂಬತ್ತರ ಯುವತಿ. ಮುಖದಲ್ಲಿ ಒತ್ತಡ ಕಾಣಿಸಿದರೂ ಕಣ್ಣುಗಳಲ್ಲಿ ಆತ್ಮವಿಶ್ವಾಸದ ಹೊಳಪು. ‘ಟಪ್’ ಎನ್ನುವ ಶಬ್ದ ಕಿವಿಗೆ ಬಿದ್ದಿದ್ದೇ ಚಿಗರೆಯಂತೆ ಓಟ. ಆರಂಭದಲ್ಲಿ ಮುಂದೆ ಸಾಗಿದ್ದ ಅಮೆರಿಕದ ಚಾಂಪಿಯನ್ ಓಟಗಾರ್ತಿ ಟೇಲರ್ ಮ್ಯಾನ್ಸನ್ ಹೆಸರನ್ನೇ ವೀಕ್ಷಕ ವಿವರಣೆಗಾರ ಪದೇಪದೇ ಉಚ್ಚರಿಸುತ್ತಾ